# ನೇಲ್ ಕಟ್ಟರ್ ಬಿಟ್ಟುಕೊಟ್ಟಿತು ಹಂತಕನ ಸುಳಿವು



ಅಮ್ಮು ಕೊಲೆ ವಿಚಾರದಲ್ಲಿ ಚಂದ್ರನ್ ತಪ್ಪಿಲ್ಲ ಎಂಬುದು ಸಾಬೀತಾದಂತಾಯಿತು. ಹೀಗಾಗಿ–

'ಚಂದ್ರನ್ ಈಸ್ ಕ್ಲಿಯರ್ಡ್ ಫ್ರಂ ದಿಸ್ ಕೇಸ್...'

'ಹಿ ಈಸ್ ಕ್ಲಿಯರ್ಡ್ ಫ್ರಂ ದಿಸ್ ಕೇಸ್...'

'ಯೆಸ್ ಸಾರ್'.

'ಇನ್ನು ಈ ಜಯಂತನ ವಿಷಯ ಸರ್... ಎಷ್ಟೊಂದು ಬಲವಾದ ಮೋಟಿವ್, ಸಾಕ್ಷಿ ಪುರಾವೆಗಳಿವೆ ಅಂದರೆ ನನ್ನ ಜಾಗದಲ್ಲಿ ಯಾರೇ ಇದ್ದರೂ ಇಷ್ಟೊತ್ತಿಗಾಗಲೇ ಅವನ ಮೇಲೆ ಚಾರ್ಜ್ ಶೀಟ್ ಹಾಕ್ತಿರ್ತಿದ್ರೇನೊ.... ಆದರೆ ನಾನು ಅವನನ್ನ ಕ್ಲಿಯರ್ ಮಾಡ್ತಾಯಿದ್ದೀನಿ'.

ಮಾಯಣ್ಣನ ವರಸೆಯನ್ನು ನೋಡಿ ಎಸ್.ಪಿ.ಯಿಂದ ಹಿಡಿದು ಎಲ್ಲರೂ ಆಶ್ಚರ್ಯಚಕಿತರಾಗಿದ್ದರು.

'ಆತ ಅಮಾಯಕ ಅನ್ನೋದಕ್ಕೆ ಸಾಕ್ಷಿಗಳೇನು ಮಾಯಣ್ಣ?'

ಅದಕ್ಕೆ ಉತ್ತರವೆಂಬಂತೆ ಮಾಯಣ್ಣ ಒಂದು ಫೋಟೊವನ್ನು ಎಸ್.ಪಿ. ಸಾಹೇಬರ ಮುಂದಕ್ಕೆ ತಳ್ಳಿದ. ಆ ಫೋಟೊವನ್ನು ಎರಡೆರಡು ಬಾರಿ ನೋಡಿ, 'ಇದರಲ್ಲಿ ಏನಿದೆ' ತಂತಿ ಮೇಲೆ ಒಣ ಹಾಕಿದ ಬಟ್ಟೆಗಳು, ಅದರ ಹಿಂದಕ್ಕೊಂದು ಮನೆ...' ಎನ್ನುತ್ತಾ ಆ ಫೋಟೊವನ್ನು ಸಾಹೇಬರು ಅದನ್ನು ತಿರುಗಿಸಿ ಮುರುಗಿಸಿ ನೋಡುತ್ತಿದ್ದಂತೆ, ಅದರ ವಿವರಣೆಗಿಳಿದಿದ್ದ ಮಾಯಣ್ಣ.

'ಅಮ್ಮು ಕೊಲೆಯಾದ ದಿನ, ಬೆಳಗ್ಗೆ 9.10ರಿಂದ 9.50ರವರೆಗೆ ಜಯಂತ್ ಅಮ್ಮು ಅವರ ಮನೆಯಲ್ಲಿದ್ದ. ಈ ನಡುವಿನ ಸಮಯದಲ್ಲಿ ಮನೆ ಕೆಲಸದಾಕೆ ಕಮಲಮ್ಮ ಕೆಳಗಿನ ಮನೆಯವರ ಬಟ್ಟೆ ಒಣ ಹಾಕಲು ಅಮ್ಮು ಮನೆಯ ಮುಂದಿನ ತಾರಸಿಗೆ ಬಂದಿದ್ದಾಳೆ. ಆಗ ಅಮ್ಮು ಮನೆಯಲ್ಲಿ ಅಮ್ಮು ಮತ್ತು ಜಯಂತನ ನಡುವೆ ತಾರಕ ಸ್ವರದಲ್ಲಿ ಜಗಳ ನಡೆಯುತ್ತಿದೆ. ಆಗ ಕಮಲಮ್ಮ ಮೇಲೊಯ್ದಿದ್ದ ಒದ್ದೆ ಬಟ್ಟೆಯ ಬುಟ್ಟಿಯನ್ನು ಅಲ್ಲೇ ಬಿಟ್ಟು, ಸತ್ಯವತಿಯವರಿಗೆ ಹೇಳಲು ಕೆಳಗೆ ಬಂದಿದ್ದಾಳೆ. ಆದರೆ ಸತ್ಯವತಿಯವರು ತಮ್ಮ ಮಗನೊಡನೆ ಫೋನ್ ಸಂಭಾಷಣೆಯಲ್ಲಿದ್ದಿದ್ದರಿಂದ ಸುಮ್ಮನಾಗಿದ್ದಾಳೆ. ನಂತರ ಜಯಂತ್ ತನ್ನ ಕಾರಿನಲ್ಲಿ ಹೊರಟ ಮೇಲೆ, ಮತ್ತೆ ತಾರಸಿಗೆ ಹೋಗಿ ಬಟ್ಟೆಯನ್ನು ಹರವಿದ್ದಾಳೆ. ಮಿಕ್ಕಿದ್ದನ್ನು ಕಮಲಮ್ಮನ ಬಾಯಿಯಲ್ಲಿ ಕೇಳಿದರೆ ಒಳಿತು'.

ವಿನಯನ ಕಡೆ ತಿರುಗಿ, 'ವಿನಯ್... ಆ ಲೇಡಿ ಪೀಸಿ ರೂಪಕಲಾ, ಕಮಲಮ್ಮನವರನ್ನು ಕರೆತಂದಿದ್ದಾರಾ ನೋಡಿ'.

'ಯೆಸ್ ಸಾರ್'.

ಕಮಲಮ್ಮ ಬೆದರಿದ ಜಿಂಕೆಯಂತೆ ಅತ್ತಿತ್ತ ನೋಡುತ್ತಾ ಮೆಲ್ಲಗೆ ಒಳಬಂದು ನಿಂತಳು.

ಮಾಯಣ್ಣನು ಅವಳನ್ನು ಶಾಂತಗೊಳಿಸುವಂತೆ, 'ಕಮಲಮ್ಮ ಏನೂ ಗಾಬರಿ ಬೇಡ, ಅದೇ ಮೊನ್ನೆ ನೀವು ನನ್ನ ಹತ್ರ ಹೇಳುದ್ರಲ್ಲ, ಅಮ್ಮು ಕೊಲೆಯಾದ ದಿನ, ಮೇಲೆ ಬಟ್ಟೆ ಒಣ ಹಾಕಲು ಹೋಗಿದ್ದಾಗ ಏನಾಯ್ತು ಅಂತ, ಅದನ್ನ ಇನ್ನೊಂದ್ಸರಿ ಇವರೆಲ್ಲರ ಮುಂದೆ ಸ್ವಲ್ಪ ಹೇಳ್ತೀರಾ?'

ಕಮಲಮ್ಮ ಆಯ್ತು ಎಂಬಂತೆ ಮೆಲ್ಲಗೆ ತಲೆ ಆಡಿಸಿದಳು.

'ಹೇಳಿ, ಮೊದಲನೇ ಸಲ ನೀವು ತಾರಸಿ ಮೇಲೆ ಹೋದಾಗ ಏನಾಯಿತು ಅಂತ'.

'ಅದೇ ಮೇಲುಕೋದ್ನ ಬಟ್ಟೆ ಒಣಗಾಕಕ್ಕೆ, ಅಲ್ಲಿ ಅಮ್ಮು ಅಕ್ಕ ಮನೇಲಿ, ಅಮ್ಮು ಅಕ್ಕ ಮತ್ತೆ ಜಯಂತಣ್ಣಂಗೂ ಜೋರ್ ಜೋರ್ ಜಗಳ ನಡೀತಾ ಇತ್ತು. ಸರಿ, ನಾನು ಬಟ್ಟೆ ಕುಕ್ಕೆ ಅಲ್ಲೇ ಮಡಗಿ, ಕೆಳಕ್ಕೆ ಅಜ್ಜಿಗೇಳನ ಅಂತ ಬಂದ್ಬುಟ್ಟೆ. ಅಜ್ಜಿ ಫೋನಗೆ ಅವ್ರ ಮಗನತ್ರ ಮಾತಾಡ್ತಿದ್ರು. ಎಂಗಾನವೋಗ್ಲಿ ಅಂತ ನಾನು ಸುಮ್ನಾದೆ'.

ಮಾಯಣ್ಣ ಆಕೆಯನ್ನು ಮಧ್ಯದಲ್ಲೇ ತಡೆದು,

'ಒಂದು ನಿಮಿಷ. ನೀವು ಅಲ್ಲಿ ಹೋದಾಗ ತಾರಸಿನಲ್ಲಿ ಕಂಬಿ ಮೇಲೆ ಮೊದಲೇ ಬಟ್ಟೆ ಒಣಗಾಕಿತ್ತ?'

'ಇಲ್ಲ ಬಿಡಿ'.

'ಆಮೇಲೆ ಏನಾಯ್ತು ಕಮಲಮ್ಮ?'

'ಒಂದು ಐದ್ ನಿಮಿಷಕ್ಕೆ ಜಯಂತಣ್ಣ ಕಾರತ್ಕೊಂಡು ಒಂಟೇ ಬಿಟ್ರು. ಆಮೇಲೆ ನಾನು ಮತ್ತೆ ಮೇಲೋಗಿ ಬಟ್ಟೆ ಒಣಗಾಕಿ ಬಂದೆ'.

'ಹೋಗಲಿ ಆವಾಗ ಯಾರಾನ ಕಂಬಿ ಮೇಲೆ ಬಟ್ಟೆ ಒಣಗಾಕಿದ್ರ?'

'ಇಲ್ಲ ಬಿಡಿ... ಅವಾಗ್ಲೂ ಪೂರ ಕಾಲೀನೆ ಇತ್ತು'.

'ಸರಿ, ಅಷ್ಟು ಸಾಕು ಕಮಲಮ್ಮ... ನೀವು ಹೊರಡಿ'.

ಕಮಲಮ್ಮನಿಗೆ ಇದೆಲ್ಲಾ ಏನುಕ್ಕೆ ಕೇಳ್ತಾಯಿದ್ದಾರೆ ಇವರು ಅಂತ ಅರ್ಥ ಆಗಿರಲಿಲ್ಲ. ಕಮಲಮ್ಮನನ್ನು ಲೇಡಿ ಪೀಸಿ ರೂಪಕಲಾ ಹೊರಗೆ ಕರೆದುಕೊಂಡು ಹೋದರು.

'ಸರ್, ನಿಮ್ಮ ಕೈಯಲ್ಲಿರೋ ಫೋಟೊ ನಮ್ಮ ಪೀಸಿ ವಿನಯ್ 11 ಗಂಟೆ 10 ನಿಮಿಷಕ್ಕೆ ತೆಗೆದಿರುವುದು. ಫೋಟೊ ಮೇಲೆ ಇದೆ ನೋಡಿ ಕ್ಲಿಕ್ ಮಾಡಿದ ಟೈಮ್. ಅಲ್ಲಿ ನೋಡಿ, ಕಂಬಿ ಮೇಲೆ ಅಮ್ಮು ಬಟ್ಟೆಗಳು ಇವೆ. ಅದರ ಅರ್ಥ ಜಯಂತ್ ಅಮ್ಮು ಮನೆಯಿಂದ ಹೊರಟು ಹೋದ ಮೇಲೂ ಅಮ್ಮು ಅವರು ಬದುಕಿದ್ದರು ಅಂತ. ಅವರು ಅವರ ವಾಷಿಂಗ್ ಮೆಷಿನ್‌ನಿಂದ ಒದ್ದೆ ಬಟ್ಟೆ ಹೊರಗೆ ತಂದು ಹಾಕಿದ್ದಾರೆ ಅಂತ...'

ಎಲ್ಲರೂ ಮಾಯಣ್ಣನ ಸೂಕ್ಷ್ಮದೃಷ್ಟಿ, ತೀಕ್ಷ್ಣ ಗ್ರಹಿಕೆ, ತರ್ಕಬದ್ಧ ವ್ಯಾಖ್ಯಾನಕ್ಕೆ ಮನಸ್ಸಿನಲ್ಲೇ ತಲೆದೂಗಿದ್ದರು. ಮಾಯಣ್ಣ ಮುಂದುವರಿಸಿ– 'ಅಷ್ಟೇ ಅಲ್ಲದೆ, ಸಾಕಷ್ಟು ಬುದ್ಧಿವಂತನಾದ ಜಯಂತನು ಕೊಲೆ ಆಯುಧವಾದ ಆ ಸರಳನ್ನು ಐದಾರು ದಿನಗಳಾದರೂ ತನ್ನ ಕಾರಿನಲ್ಲಿಯೇ